**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು–1**

ಸಂಖ್ಯೆ:ಸಿ1[4]ನಿ.ಹು.ಅ.ಪ:47/2017–18 **ದಿನಾಂಕ:06–03–2018**

**ಸುತ್ತೋಲೆ**

**ಅತೀ ತುರ್ತು**

ಇವರಿಗೆ,

1. ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
2. ಎಲ್ಲಾ ಪ್ರಾಂಶುಪಾಲರು, ಡಯಟ್, ಸಾರ್ವಜನಿಕ ಶಿಕ್ಷಣ ಇಲಾಖೆ.

ವಿಷಯ: ಪ್ರಾಥಮಿಕ, ಪ್ರೌಢಶಾಲಾ ಸಹಶಿಕ್ಷಕರು ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ನಿರ್ದಿಷ್ಟ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:1] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 16 ಇಟಿಆರ್ 2017 ದಿ:18–12–2017.

2] ಈ ಕಛೇರಿಯ ಜ್ಞಾಪನ ಸಂಖ್ಯೆ:ಸಿ1[4]ನಿ.ಹು.ಅ.ಪ/47/2017–18 ದಿನಾಂಕ 14–02–2018 ಮತ್ತು 24–02–2018

&&&&

ಸರ್ಕಾರಿ ಪ್ರಾಥಮಿಕಶಾಲಾ ಶಿಕ್ಷಕರು, ಪ್ರೌಢಶಾಲಾ ಸಹಶಿಕ್ಷಕರು ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ [ಸಿ.ಆರ್.ಪಿ, ಬಿ.ಆರ್.ಪಿ, ಇ.ಸಿ.ಒ[ಪ್ರಾಥಮಿಕ ಮತ್ತು ಪ್ರೌಢ], ಬಿ.ಆರ್.ಸಿ, ಎ.ಡಿ.ಪಿ.ಐ ಎಂ.ಎಂ.ಎಸ್. ಎ.ಪಿ.ಸಿ.ಒ [ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ] ಹಾಗೂ ವಿಷಯ ಪರಿವೀಕ್ಷಕರ] ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸುವ ಬಗ್ಗೆ ಅರ್ಜಿ ಸಲ್ಲಿಸಲು ಉಲ್ಲೇಖ[2]ರಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಸಲು ದಿನಾಂಕ:04–03–2018 ಆಗಿರುತ್ತದೆ.

ಮುಂದಿನ ಹಂತವಾಗಿ ಆಯಾಯಾ ಜಿಲ್ಲೆಯ ಉಪನಿರ್ದೇಶಕರು[ಆಡಳಿತ]–ರವರು ಆನ್‌ಲೈನ್‌ಲ್ಲಿ ಸಲ್ಲಿಕೆಯಾಗಿರುವ ಅಭ್ಯರ್ಥಿಗಳ ಅರ್ಜಿಗಳ ಅರ್ಹತೆಯನ್ನು ಉಲ್ಲೇಖದ ಈ ಕಛೇರಿಯ ಜ್ಞಾಪನದನ್ವಯ ಪರಿಶೀಲಿಸಿ ಸೇವಾನುಭವ ಮತ್ತು ಹೆಚ್ಚಿನ ವಿದ್ಯಾರ್ಹತೆಗೆ ನಿಗಧಿಪಡಿಸಿರುವ ಅಂಕಗಳ ಬಗ್ಗೆ ಪರಿಶೀಲಿಸಿ ***ದಿನಾಂಕ:08-03-2018ರೊಳಗೆ ಅನುಮೋದನೆಯನ್ನು ನೀಡುವುದು.*** ಮತ್ತು ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಅತೀ ತುರ್ತಾಗಿ ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರಿಗೆ ಕಳುಹಿಸುವುದು. ಡಯಟ್ ಪ್ರಾಂಶುಪಾಲರಿಗೆ ಕಳುಹಿಸಿದ ವಿವರದ ***ಸಾಫ್ಟ್ ಕಾಪಿಯನ್ನು*** ***est1cpi@gmail.com ಈ ವಿಳಾಸಕ್ಕೆ ಇ–ಮೇಲ್*** ಮೂಲಕ ಸಲ್ಲಿಸಲು ತಿಳಿಸಿದೆ.

ಅರ್ಜಿಗಳನ್ನು ಪರಿಶೀಲಿಸುವಾಗ ಈ ಕೆಳಕಂಡ ಅಂಶಗಳಂತೆ ಕ್ರಮವಹಿಸುವುದು.

1. ಸರ್ಕಾರಿ ಪ್ರಾಥಮಿಕಶಾಲಾ ಶಿಕ್ಷಕರು, ಪ್ರೌಢಶಾಲಾ ಸಹಶಿಕ್ಷಕರು ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಎಲ್ಲಾ ಅರ್ಜಿಗಳನ್ನು ಆಯಾಯ ಉಪನಿರ್ದೇಶಕರು[ಆಡಳಿತ]ರವರೇ ಪರಿಶೀಲಿಸಿ ಅನುಮೋದನೆ ನೀಡುವುದು.

ತಮ್ಮ ನಂಬುಗೆಯ,

[ಕೆ.ಬಿ.ಆಂಜನಪ್ಪ]

ಅಪರ ನಿರ್ದೇಶಕರು[ಆಡಳಿತ].

ಪ್ರತಿಯನ್ನು,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.